**ದಿನಾಂಕ 06.08.2019 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ಜೆ.ಟಿ. ವಕೀಲರಿಂದ**

ನಮ್ಮ ತಂದೆಗೆ ನಾವು ಒಟ್ಟು 3 ಜನ ಮಕ್ಕಳು. ದಾವಾ ಬಿ ಷೆಡ್ಯೂಲ್ ಸ್ವತ್ತುಗಳು ದೇವಪ್ಪನವರಿಗೆ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದೇವಪ್ಪನವರಿಗೆ ಎಷ್ಟು ಜನ ಹೆಂಡತಿಯರು ಎಂದು ನನಗೆ ಗೊತ್ತಿಲ್ಲ. ಶಾಂತಪ್ಪನವರಿಗೆ ಇಬ್ಬರು ಹೆಂಡತಿಯರು. ಶಾಂತಪ್ಪನವರ ಅಕ್ಕತಂಗಿಯರು ನನಗೆ ಗೊತ್ತಿಲ್ಲ. ಅಣ್ಣತಮ್ಮಂದಿರು ನನಗೆ ಗೊತ್ತು. 2 ಮತ್ತು 4 ನೇ ಪ್ರತಿವಾದಿ ಇಂದಿಗೂ ಒಟ್ಟು ಕುಟುಂಬದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಶಾಂತಪ್ಪನವರ ಹೆಂಡತಿಯರ ಹೆಸರುಗಳನ್ನು ಈಗ ಹೇಳಲು ನನಗೆ ಮರೆತು ಹೋಗಿದೆ. 2 ನೇ ಪ್ರತಿವಾದಿಗೆ ಒಟ್ಟು 4 ನೇ ಜನ ಮಕ್ಕಳು. 2 ನೇ ಪ್ರತಿವಾದಿಯ ಮೊದಲನೆ ಹೆಂಡತಿಗೆ 2 ಮಕ್ಕಳು, ಮತ್ತು ಎರಡನೇ ಹೆಂಡತಿಗೆ 2 ಮಕ್ಕಳು. 2 ನೇ ಪ್ರತಿವಾದಿಯ ಮಕ್ಕಳುಗಳು ಹೆಸರು ನನಗೆ ಈಗ ಹೇಳಲು ಮರೆತು ಹೋಗಿದೆ. ಶಾಂತಪ್ಪನವರ ಮೊದಲನೆ ಹೆಂಡತಿಯ ಮೊದಲ ಮಗಳಿಗೆ ಸುಮಾರು 40 ವರ್ಷ ಆಗಿರಬಹುದು. ಶಾಂತಪ್ಪನವರ ಮೊದಲ ಹೆಂಡತಿಯ ಮೊದಲನೆ ಮಗಳಾದ 6 ನೇ ಪ್ರತಿವಾದಿಯ ಸಹಿಯನ್ನು ಕ್ರಯ ಪತ್ರಕ್ಕೆ ಪಡೆದುಕೊಂಡಿದ್ದೇವೆ 6 ನೇ ಪ್ರತಿವಾದಿಯ ಸಹಿಯನ್ನು ಕ್ರಯ ಪತ್ರಕ್ಕೆ ಪಡೆದುಕೊಳ್ಳದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಪ್ಪನವರ ಮೊದಲನೆ ಹೆಂಡತಿ ಮಣಿ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ಮಣಿ ಸಹಿ ಹಾಕಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ವಯಸ್ಸನ್ನು ಕ್ರಯ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಶರಿಕ್ಕಾಗಿ 6 ನೇ ಪ್ರತಿವಾದಿ ವಯಸ್ಕರಾಗಿದ್ದರೂ ಅವರ ವಯಸ್ಸನ್ನು ನಮೂದಿಸದೇ ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ಮತ್ತು ಆ ಕ್ರಯ ಪತ್ರದಲ್ಲಿ 6 ನೇ ಪ್ರತಿವಾದಿಯ ಮೈನರ್ ಗಾರ್ಡಿಯನ್ನಾಗಿ ಕ್ರಯ ಪತ್ರ ಬರೆದು ಕೊಟ್ಟಿದ್ದಾರೆ ಎಂದರೆ ಸರಿ. ನಾನು ಮತ್ತು 2 ನೇ ಪ್ರತಿವಾದಿ ವಾದಿಗಳ ಹಿಸ್ಸೆಯ ಹಕ್ಕನ್ನು ಪಡೆದುಕೊಳ್ಳಬೇಕಾಗಿ ಸುಳ್ಳು ಕ್ರಯ ಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ. 31 ಮೋಸದಿಂದ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.